

ನಿಧಾನವಾಗಿ ಓದಿಕೊಳ್ಳಿ, ಉತ್ತರ ಗೊತ್ತಿರುವ ಪ್ರಶ್ನೆಗಳಿಗೆ ಸ್ಫುಟವಾಗಿ ಉತ್ತರ ಬರೆದ ನಂತರ ಯಾವ ಪ್ರಶ್ನೆಗಳಿಗೆ ಉತ್ತರ ಬರೆದಿಲ್ಲವೊ, ಯಾವುದನ್ನಾದರೂ ಅರ್ಧಕ್ಕೆ ನಿಲ್ಲಿಸಿದ್ದೀರೋ ಅದನ್ನು ಮುಂದುವರಿಸಲು ಪ್ರಯತ್ನಿಸಿ.

- ಉತ್ತರ ಬರೆಯುವಾಗ ಯಾವುದಾದರೂ ಪ್ರಶ್ನೆಗೆ ಉತ್ತರ ದೊರೆಯದಿದ್ದಾಗ ಅದರ ಬಗ್ಗೆಯೇ ಚಿಂತಿಸುತ್ತ ಸಮಯ ಕಳೆಯಬೇಡಿ. ಮುಂದಿನ ಪ್ರಶ್ನೆಗೆ ಉತ್ತರ ಬರೆಯಲು ಪ್ರಾರಂಭಿಸಿ.
- ಪರೀಕ್ಷೆಯ ಕೊನೆಗೆ ಸಮಯ ಉಳಿದರೆ ಪ್ರತಿ ಉತ್ತರದ ನಂತರ ಗೆರೆ ಎಳೆಯಿರಿ. ಯಾವುದಾದರೂ ಪ್ರಶ್ನೆಗೆ ಅರ್ಧ ಅಥವಾ ಕಡಿಮೆ ಉತ್ತರ ಬರೆದಿದ್ದರೆ ತುಸು ಜಾಗ ಬಿಟ್ಟು ಮುಂದಿನ ಉತ್ತರ ಬರೆಯಿರಿ.
- ಕೆಲವು ಪ್ರಶ್ನೆಗಳಿಗೆ ಇಂತಿಷ್ಟೇ ಪದಗಳಲ್ಲಿ ಉತ್ತರ ಬರೆಯಬೇಕೆಂಬ ನಿರ್ಬಂಧವಿರುತ್ತದೆ, ಅದನ್ನು ತಪ್ಪದೇ ಪಾಲಿಸಿ. ಉತ್ತರ ಬರೆಯುವಾಗ ಸಮಯದ ಬಗ್ಗೆ ಗಮನವಿರಲಿ.
- ಪ್ರತೀ ಗುಂಪಿನ ಪ್ರಶ್ನೆಗಳಲ್ಲೂ ಆಯ್ಕೆಗಳಿರುತ್ತವೆ. ಅದನ್ನು ಗಮನಿಸಿ, ಕೇಳಿದಷ್ಟು ಪ್ರಶ್ನೆಗಳಿಗೆ ಮಾತ್ರ ಉತ್ತರ ಬರೆಯಿರಿ.
- ನೂರು ಅಂಕದ ಪ್ರಶ್ನೆಗಳಿಗೆ ಉತ್ತರಿಸಿದ ಮೇಲೂ ಸಮಯವುಳಿದರೆ, ಇತರ ಪ್ರಶ್ನೆಗಳಿಗೂ ಉತ್ತರ ಬರೆಯಿರಿ.

## ಉತ್ತರಿಸುವ ರೀತಿಯೂ ಮುಖ್ಯ

- ಉತ್ತರಗಳನ್ನು ಸ್ಪಷ್ಟವಾಗಿ ಸಾಧ್ಯವಾದಷ್ಟೂ ಕಾಟು–ಚಿತ್ತುಗಳಿಲ್ಲದೆ ಅರ್ಥವಾಗುವಂತೆ ಬರೆಯಿರಿ.
- ಚಿತ್ರ ಬರೆದು ಉತ್ತರಿಸುವ ಪ್ರಶ್ನೆಗಳನ್ನು ಸಾಧ್ಯವಾದಷ್ಟೂ ನೀಟಾಗಿ ಬರೆದು ಭಾಗಗಳನ್ನು ಗುರುತಿಸಿ. ಗಣಿತದ ಲೆಕ್ಕಗಳ ಉತ್ತರ ಸರಿಯಾಗಿದೆಯೇ ಎಂಬುದನ್ನು ಪುನಃ ಪರೀಕ್ಷಿಸಲು ಉತ್ತರ ಪತ್ರಿಕೆಯ ಕೊನೆಯ ಹಾಳೆಯಲ್ಲಿ ಬರೆದು ಪರೀಕ್ಷಿಸಿ, ತಾಳೆ ಮಾಡಿಕೊಳ್ಳಿ.
- ಉತ್ತರ ಬರೆಯುವಾಗ ಸಮಯ ನಿರ್ವಹಣೆ ಮುಖ್ಯ. ತಯಾರಿ ಸರಿಯಾಗಿದ್ದರೆ 100 ಅಂಕದ ಪ್ರಶ್ನೆಪತ್ರಿಕೆಯನ್ನು ಎರಡೂಕಾಲು ಗಂಟೆಗಳಲ್ಲಿ ಬರೆದು ಮುಗಿಸಿ ಉಳಿದ ಸಮಯದಲ್ಲಿ ಬರೆದ ಉತ್ತರಗಳನ್ನು ಪರಿಶೀಲಿಸಬಹುದು.
- ಉತ್ತರ ಪತ್ರಿಕೆಯಲ್ಲಿ ಪ್ರಶ್ನೆಯ ಸಂಖ್ಯೆಯನ್ನು ಬರೆದರೆ ಸಾಕು. ಇಡೀ ಪ್ರಶ್ನೆಯನ್ನು ಬರೆಯುವ ಅವಶ್ಯಕತೆ ಇಲ್ಲ. ಅವಶ್ಯಕತೆ ಇದ್ದಲ್ಲಿ ಉತ್ತರದ ಕೆಲವು ಪದ, ಅಂಕಿ–ಅಂಶಗಳನ್ನು ಅಂಡರ್‌ಲೈನ್ ಮಾಡಿ.

## ಪರೀಕ್ಷೆ ತಯಾರಿಗೆ ಹೊತ್ತು-ಗೊತ್ತು

ವಿದ್ಯಾರ್ಥಿಯು ಯಾವ ಹೊತ್ತಿನಲ್ಲಿ ಓದಬೇಕು? ಬೆಳಗಿನ ಜಾವ ಓದಿದರೆ ಚೆನ್ನಾಗಿ ತಲೆಗೆ ಹತ್ತುತ್ತದೆ. ರಾತ್ರಿ ನಿದ್ದೆಗೆಟ್ಟು ಓದಿದರೆ ಬರುವುದೂ ಮರೆತು ಹೋಗುತ್ತದೆ ಎಂಬ ಅಪನಂಬಿಕೆ ಅನೇಕರಲ್ಲಿದೆ. ಇದಕ್ಕೆ ಯಾವ ವೈಜ್ಞಾನಿಕ ಆಧಾರವೂ ಇಲ್ಲ. ಒಟ್ಟನಲ್ಲಿ ವಿದ್ಯಾರ್ಥಿ ಓದಲು ಕುಳಿತುಕೊಳ್ಳುವ ಸ್ಥಳ ಪ್ರಶಾಂತವಾಗಿದ್ದು, ಸರಿಯಾದ ಬೆಳಕಿನ ವ್ಯವಸ್ಥೆ ಹೊಂದಿದ್ದರೆ ಸಾಕು. ಸಮಯದ ಆಯ್ಕೆಯಲ್ಲಿ ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯವಿದೆಯಾದರೂ, ತಜ್ಞರ ಪ್ರಕಾರ ಬೆಳಗಿನ ಜಾವ ಎಲ್ಲಾ ಯಾಂತ್ರಿಕ ಚಟುವಟಿಕೆಗಳಿಂದ ಮುಕ್ತವಾಗಿರುವುದರಿಂದ ಪರಿಸರ ಶಾಂತವಾಗಿರುತ್ತದೆ. ಮನೆಯ ಟೀವಿ, ರೇಡಿಯೊ, ವಿಡಿಯೊ ಎಲ್ಲ ಮನರಂಜನಾ ಸಾಧನಗಳು ಸುಮ್ಮನಿರುತ್ತವೆ. ಅಂಥ ವೇಳೆಯಲ್ಲಿ ಗಮನವಿಟ್ಟು ಓದುವ ವಿದ್ಯಾರ್ಥಿ ಹೆಚ್ಚು ಹೆಚ್ಚು ವಿಷಯಗಳನ್ನು ನೆನಪಿಟ್ಟುಕೊಳ್ಳಬಹುದು. ಆದರೆ ವೈದ್ಯಕೀಯ ವಿಜ್ಞಾನದ ಪ್ರಕಾರ ಓದಲು ಇಂತಹ ವೇಳೆ ಶ್ರೇಷ್ಠ, ಮತ್ತೊಂದು ನಿಕೃಷ್ಟ ಎನ್ನುವುದು ಇಲ್ಲವೇ ಇಲ್ಲ. ಯಾವ ಪರಿಸರದಲ್ಲಿ ಓದುತ್ತಿದ್ದಾನೆ ಮತ್ತು ಎಷ್ಟರಮಟ್ಟಿಗೆ ಗಮನವಿಟ್ಟು ಓದುತ್ತಿದ್ದಾನೆ ಎನ್ನುವುದು ಮುಖ್ಯ.

## ಗ್ರೂಪ್ ಸ್ಟಡಿ ಮತ್ತು ನೈಟ್‌ಔಟ್

ನಮ್ಮ ಬಹುತೇಕ ತಾಲ್ಲೂಕು, ಪಟ್ಟಣ ಕೇಂದ್ರಗಳ ವಿದ್ಯಾರ್ಥಿ ಸಮುದಾಯಕ್ಕೆ ಅಂಟಿಕೊಂಡಿರುವ ಹೊಸ ಕಾಯಿಲೆಯೆಂದರೆ ಗ್ರೂಪ್ ಸ್ಟಡಿ ಅಥವಾ ಗುಂಪು ಅಧ್ಯಯನದ್ದು. ಇದರಿಂದಾಗುವ ಲಾಭಕ್ಕಿಂತ ನಷ್ಟವೇ ಹೆಚ್ಚು. ಒಟ್ಟಿಗೆ ಓದುತ್ತೇವೆಂದು ಒಂದೆಡೆ ಸೇರುವ ವಿದ್ಯಾರ್ಥಿಗಳು ಹರಟುತ್ತಾ ಅಮೂಲ್ಯ ಸಮಯವನ್ನು ಕಳೆದು, ರಾತ್ರಿ ಹೊತ್ತಾದ ನಂತರ ಮಲಗಿ, ಮರುದಿನ ಪೂರ್ತಿ ನಿದ್ದೆಯ ಮಬ್ಬಿನಲ್ಲೇ ಇರುವುದರಿಂದ ಏನನ್ನೋದಿದರೂ ಅರ್ಥವಾಗುವುದಿಲ್ಲ. ಆದ್ದರಿಂದ ‘ಗ್ರೂಪ್ ಸ್ಟಡಿ’ಯ ಪ್ರಯತ್ನ ಮಾಡದಿರುವುದೇ ಒಳ್ಳೆಯದು. ಪರೀಕ್ಷೆಯ ಹಿಂದಿನ ರಾತ್ರಿ ಪೂರ್ತಿ ಓದುವ ‘ನೈಟ್‌ಔಟ್’ನಿಂದಾಗಿ ಹೆಚ್ಚಿನ ಮಾನಸಿಕ ಒತ್ತಡಕ್ಕೊಳಗಾಗುವ ಸಾಧ್ಯತೆಗಳಿರುತ್ತವೆ. ಆ ರೀತಿ ನಿದ್ದೆಗೆಟ್ಟು ಓದಬೇಡಿ. ಪರೀಕ್ಷಾ ಕೊಠಡಿಯ ಶಬ್ದ ಮಾಲಿನ್ಯರಹಿತ ವಾತಾವರಣ ಅನೇಕ ವಿದ್ಯಾರ್ಥಿಗಳನ್ನು ನಿದ್ದೆಗೆ ದೂಡಿದ ಉದಾಹರಣೆಗಳಿವೆ.

## ಪೋಷಕರ ಜವಾಬ್ದಾರಿ

ಮಕ್ಕಳ ಬೆಳವಣಿಗೆಯ ಹಂತದಲ್ಲಿ ಯಶಸ್ಸನ್ನು ನಿರೀಕ್ಷಿಸುವುದು ಪೋಷಕರ ಸಹಜಗುಣ. ಮಕ್ಕಳ ಯಶಸ್ಸಿಗೆ ಬೇಕಾದ ಶಿಕ್ಷಣ ಕೊಡಿಸುವುದರ ಜೊತೆ ಉತ್ತಮ ಅಂಕ ಗಳಿಸಲು ಉತ್ತೇಜನ ನೀಡಿ. ಆದರೆ

SSLC-PUC